

# ಘಂಟೆ ಗಣಪ

ಚಿತ್ರ– ಲೇಖನ:
**ಜಿ.ಎಸ್.ರಾಮಕೃಷ್ಣ ಗುಂಜೂರು**

ಮಂಗಳೂರಿನ ಹೈವೇಯಿಂದ ಧರ್ಮಸ್ಥಳಕ್ಕೆ ಹೋಗುವ ಮಾರ್ಗದಲ್ಲಿ ಹತ್ತು ನಿಮಿಷ ಪ್ರಯಾಣ ಸಾಗಿದ ನಂತರ, ಸ್ವಲ್ಪ ದೂರದಲ್ಲಿ 'ಸೌತಡ್ಕ ಗಣಪತಿ ದೇವಸ್ಥಾನಕ್ಕೆ ದಾರಿ' ಎಂಬ ದ್ವಾರ ಮತ್ತು ನಾಮಫಲಕ ಕಾಣಿಸಿತು. ಆ ಹೆಬ್ಬಾಗಿಲಿನಿಂದ ಕಿರಿದಾದ ರಸ್ತೆಯಲ್ಲಿ ಸಾಗಿ ಮೂರು ಕಿ.ಮೀ ದಾಟಿದ ನಂತರ ಈ ದೇವಸ್ಥಾನ ಸಿಗುತ್ತದೆ.

ಮರಗಳ ಉದ್ಯಾನದಲ್ಲಿ ಮರದ ನೆರಳಿನಲ್ಲಿ ತಣ್ಣಗೆ ತಂಪಾಗಿ ಕುಳಿತಿದ್ದಾನೆ ಮಹಾಗಣಪತಿ! ಗುಡಿಯಿಲ್ಲ, ಗೋಪುರವಿಲ್ಲ. ಮುಖ ದ್ವಾರವಿಲ್ಲ! ವಿಐಪಿ ಎಂಟ್ರಿ, ಶೀಘ್ರ ದರ್ಶನ ಎಂದು ಕರೆಯಲ್ಪಡುವ ಟಿಕೇಟುಗಳೂ ಇಲ್ಲ! ದರ್ಶನಕ್ಕೆ ಕ್ಯೂನಲ್ಲಿ ಕಾಯುವ ಪ್ರಶ್ನೆಯೇ ಇಲ್ಲ. ಎಲ್ಲರಿಗೂ ಒಂದೇ ದರ್ಶನ.

ಇಲ್ಲಿನ ಮಹಾಗಣಪತಿಗೆ, ಧರೆಗೆ ಸುರಿಯುವ ಮಳೆಯೇ ಮಹಾಭಿಷೇಕ, ಸೂರ್ಯನೇ ಬೆಳಕು, ಗಾಳಿಯೇ ಬೀಸುವ ಚಾಮರ, ಮರಗಳ ನೆರಳೇ ಸೂರು. ಬೆಳ್ಳಿ, ಬಂಗಾರ, ಹಣ, ಆಸ್ತಿಯೇ ಪ್ರಧಾನವಾಗಿರುವ ಇಂದಿನ ದೇವಸ್ಥಾನಗಳು, ಸಂಪತ್ತನ್ನು ಕ್ರೋಢೀಕರಿಸುವ ಕೇಂದ್ರಗಳಾಗಿ ಪರಿವರ್ತನೆಯಾಗುತ್ತಿವೆ. ಆದರೆ ಇಲ್ಲಿ ಪ್ರಕೃತಿಯ ಮಡಿಲಲ್ಲಿ ಸೂರಿಲ್ಲದ ಈ ಗಣಪ ಕೊಂಚ ಭಿನ್ನ.

ಇಷ್ಟೊಂದು ಸರಳ ಸುಂದರ ಗಣಪ ಇಲ್ಲಿ ಹೇಗೆ ಬಂದ? ತುಂಬ ಹಿಂದೆ ಗೋವುಗಳನ್ನು ಕಾಯುವ ಗೋಪಾಲಕರು, ಕುಕ್ಕಡ ಎಂದು ಕರೆಯಲ್ಪಡುವ ಕಾಡಿನ ಸುತ್ತಮುತ್ತ ತಮ್ಮ ಗೋವುಗಳನ್ನು ಮೇಯಿಸಿಕೊಂಡು ಬರುತ್ತಿದ್ದರಂತೆ. ಹೀಗೆ ಒಂದು ದಿನ ಈ ಗೋವುಗಳನ್ನು ಮೇಯಿಸಲು ಬಂದ ಗೋಪಾಲಕರಿಗೆ, ದಟ್ಟವಾಗಿ ಬೆಳೆದು ನಿಂತ ಗಿಡಗಳ ಪೊದೆಯೊಳಗೆ ಅರ್ಧ ಮಣ್ಣಲ್ಲಿ ಭೂಗತವಾಗಿದ್ದ ಗಣಪನ ವಿಗ್ರಹ ಕಣ್ಣಿಗೆ ಬಿದ್ದಿತಂತೆ. ಅವರು ಈ ಸ್ಥಳವನ್ನು ಸ್ವಚ್ಛಮಾಡಿ, ಮಣ್ಣಿನಲ್ಲಿ ಹೂತ್ತಿದ್ದ ಈ ಮೂರ್ತಿಯನ್ನು ಮೇಲಕ್ಕೆ ಎತ್ತಿ ನಿಲ್ಲಿಸಿದರಂತೆ. ಬಳಿಕ ಮೂರ್ತಿಯನ್ನು ಅನತಿ ದೂರದಲ್ಲಿದ್ದ ದೊಡ್ಡ ಮರಗಳ ತೋಪಿಗೆ ತೆಗೆದುಕೊಂಡು ಬಂದು, ಒಂದು ಮರದ ನೆರಳಿನಲ್ಲಿ, ಅಡಿಗಲ್ಲನ್ನು ಇಟ್ಟು, ಮರದ ಬುಡಕ್ಕೆ ಆಶ್ರಯ ಮಾಡಿ ಪ್ರತಿಷ್ಟಾಪಿಸಿದರಂತೆ.

ಈ ಸಮಾರಂಭಕ್ಕೆ ಯಾವ ದೊಡ್ಡ ಮಠಾಧೀಶರಾಗಲೀ, ರಾಜಕಾರಣಿಗಳಾಗಲೀ ಬರಲಿಲ್ಲ. ಸಮಾರಂಭ ನಡೆಯಲಿಲ್ಲ. ಗೋಪಾಲಕರು ಮಧ್ಯಾಹ್ನದ ಊಟಕ್ಕೆ ತಾವು ತಂದಿದ್ದ ಸೌತೆಕಾಯಿಯನ್ನು ಕತ್ತರಿಸಿ ಹೋಳುಗಳನ್ನು ಗಣಪನಿಗೆ ಅರ್ಪಿಸಿದರು. ಸೌತೇಕಾಯಿಯನ್ನು ನೈವೇದ್ಯವಾಗಿ ಅರ್ಪಿಸಿದ್ದರಿಂದ ಈ ಗಣಪನಿಗೆ ಸೌತಡ್ಕ ಗಣಪತಿ ಎಂದೇ ಹೆಸರು ಬಂತು.

1965ರಿಂದೀಚೆಗೆ ಜೆ.ಕೃಷ್ಣಭಟ್ ಅವರ ಕುಟುಂಬ ಈ ಗಣಪನಿಗೆ ನಿತ್ಯ ಪೂಜೆ ನಡೆಸುತ್ತಿದೆ. 1973ರಲ್ಲಿ ಭಕ್ತ ಸಮೂಹ ಸೇರಿ ಒಂದು ಕಟ್ಟೆ ನಿರ್ಮಾಣ ಮಾಡಿ, ಜಗಲಿಯ ಮೇಲೆ ಈ ಮೂರ್ತಿಯನ್ನು ಪ್ರತಿಷ್ಠಾಪಿಸಿದರು. ಇಲ್ಲಿ ಒಂದು ವಿಶಿಷ್ಟ ಆಚರಣೆ ಎಂದರೆ, ಇಲ್ಲಿಗೆ ಬಂದವರೆಲ್ಲ ತಮ್ಮ ಇಷ್ಟಾರ್ಥಗಳು ಫಲಿಸಲೆಂದು ಗಣಪನಿಗೆ ಘಂಟೆಯನ್ನು ಕಾಣಿಕೆಯಾಗಿ ನೀಡುವುದು.